

## 'ಮುಗ್ಧತೆ'

ಒಂದನೇ ತರಗತಿಯಲ್ಲಿ ಓದುತ್ತಿದ್ದ ನನ್ನ ಮೊಮ್ಮಗ ವೇದಾಂತನಿಗೆ ಕೂಡಿಸುವ ಮತ್ತು ಕಳೆಯುವ ಲೆಕ್ಕ ಹೇಳಿಕೊಡುತ್ತಿದ್ದೆ. 'ನೋಡೋ ವೇದಾಂತ ನಿನ್ನಲ್ಲಿ 10 ಮಾವಿನಹಣ್ಣು ಇದೆಯೆಂದುಕೋ. ಅದರಲ್ಲಿ ಎಂಟು ಹಣ್ಣು ನಿನ್ನ ತಂಗಿಗೆ ಕೊಟ್ಟರೆ ಎಷ್ಟು ಉಳಿಯುತ್ತೆ' ಎಂದು ಕೇಳಿದೆ. 'ಏನೂ ಉಳಿಯಲ್ಲ ಅಜ್ಜಿ, ನನಗೆ ಮಾವಿನ ಹಣ್ಣೊಂದ್ರೆ ತುಂಬಾ ಪ್ರೀತಿ. ನಾನೇ ಬೇಕಾದ್ರೆ 10 ಹಣ್ಣು ಇಟ್ಕೋತಿನಿ; ಎಂಟ್ಯಾಕೆ ಅವಳಿಗೆ ಕೊಡಬೇಕು. ಕೊಡಬೇಕಿದ್ರೆ ಎರಡೇ ಕೊಡ್ತೀನಿ. ಇಂತಹ ಲೆಕ್ಕ ನೀವು ಕೊಡ್ಲೇ ಬೇಡಿ' ಎಂದು ಅಳಲು ಶುರು ಮಾಡಬೇಕೇ! ಅವನ ಚುರುಕುತನಕ್ಕೆ ನನಗೆ ಖುಷಿಯಾಯಿತಾದರೂ ಅವನ ಮುಗ್ಧತೆ ಕಂಡು ಜೋರಾಗಿ ನಕ್ಕುಬಿಟ್ಟೆ.

**ರಾಜಲಕ್ಷ್ಮೀ ವಿ. ಶೆಣೈ**

## 'ಸಜೀವ ಪ್ರಮಾಣಪತ್ರ'

ನಮ್ಮ ಅಂಚೆ ಕಚೇರಿಗಳಲ್ಲಿ ನಿವೃತ್ತರಿಗೆ ವಿಶ್ರಾಂತಿ ವೇತನ ನೀಡುವ ಕೆಲಸವೂ ಇರುತ್ತದೆ. ವರ್ಷಕ್ಕೊಮ್ಮೆ ನಿವೃತ್ತಿವೇತನದಾರರ ಸಜೀವ ಪ್ರಮಾಣಪತ್ರವನ್ನು ಪಡೆದುಕೊಂಡು ಸಂರಕ್ಷಿಸಿ ಇಡಬೇಕಾಗುತ್ತದೆ. ಒಮ್ಮೆ ನಮ್ಮ ಕಚೇರಿಗೆ ಬಂದ ಅಧಿಕಾರಿಯೊಬ್ಬರು ನಿವೃತ್ತಿ ವೇತನದಾರರ ಲೈಫ್ ಸರ್ಟಿಫಿಕೇಟ್ ಫೈಲನ್ನು ಕೇಳಿ ಪಡೆದು ಪರೀಕ್ಷಿಸತೊಡಗಿದರು. ಒಬ್ಬ ನಿವೃತ್ತಿ ವೇತನದಾರರ ಪ್ರಸಕ್ತ ವರ್ಷದ ಲೈಫ್ ಸರ್ಟಿಫಿಕೇಟ್ ಇದ್ದು, ಹಿಂದಿನ ವರ್ಷದ್ದು ಇರಲಿಲ್ಲ. 'ಅದು ಹ್ಯಾಗ್ರೀ ಅವರಿಗೆ ನಿವೃತ್ತಿ ವೇತನ ನೀಡಿದಿರಿ?' ಎಂದು ಕೇಳಬೇಕೆ. ಈ ವರ್ಷದ ಲೈಫ್ ಸರ್ಟಿಫಿಕೇಟ್ ಇದೆಯಲ್ಲ ಎಂದರೂ ಕೇಳಲಿಲ್ಲ. ಹಿಂದಿನ ವರ್ಷದ ಲೈಫ್ ಸರ್ಟಿಫಿಕೇಟನ್ನೂ ಪಡೆದು ಫೈಲ್ ಮಾಡುತ್ತೇವೆ ಎಂದಾಗಲೇ ಅವರಿಗೆ ನಿರಾಳವಾಯಿತೆನ್ನಿ!

**ಯಜ್ಞನಾರಾಯಣ ಉಳ್ಳೂರ**



ಚಿತ್ರಗಳು: ಗಣೇಶ ಆಚಾರ್ಯ